# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | 1722 |
| ಸದಸ್ಯರ ಹೆಸರು | ಶ್ರೀ ಎಸ್.ರವಿ<br>(ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | 23-03-2026 |
| ಉತ್ತರಿಸುವವರು | ಅರಣ್ಯ ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಬೆಂಗಳೂರು ದಕ್ಷಿಣ ಜಿಲ್ಲೆಯಲ್ಲಿ ಕಾಡಾನೆಗಳ ಹಾವಳಿ ಹೆಚ್ಚಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, 2025-26ನೇ ಸಾಲಿನಲ್ಲಿ ಎಷ್ಟು ಪ್ರಕರಣಗಳು ಬೆಳಕಿಗೆ ಬಂದಿವೆ; ಈ ಪ್ರಕರಣಗಳಲ್ಲಿ ಜೀವಹಾನಿ, ಆಸ್ತಿ ಹಾನಿ ಮತ್ತು ಬೆಳೆ ಹಾನಿ ಹೊಂದಿರುವವರಿಗೆ ಸಹಾಯಧನ ಒದಗಿಸಲು ಕ್ರಮ ಕೈಗೊಳ್ಳಲಾಗಿದೆಯೇ; ಕೈಗೊಂಡಿದ್ದಲ್ಲಿ, ಪ್ರಕರಣವಾರು ಸಂಪೂರ್ಣ ವಿವರ ನೀಡುವುದು; | ಬಂದಿದೆ.<br><br>2025-26ನೇ ಸಾಲಿನಲ್ಲಿ ಬೆಂಗಳೂರು ದಕ್ಷಿಣ ಜಿಲ್ಲೆಯಲ್ಲಿ ಕಾಡಾನೆಗಳ ಹಾವಳಿಯಿಂದ ಜೀವಹಾನಿ ಆಸ್ತಿ ಹಾನಿ ಮತ್ತು ಬೆಳೆ ಹಾನಿ ಪ್ರಕರಣಗಳ ಸಂಖ್ಯೆ ಹಾಗೂ ಪಾವತಿಸಿದ ಪರಿಹಾರದ ಮೊತ್ತದ ವಿವರ ಅನುಬಂಧ-01ರಲ್ಲಿ ಒದಗಿಸಲಾಗಿದೆ. |
| ಆ) | ಕಾಡಾನೆಗಳ ಹಾವಳಿಗೆ ಕಡಿವಾಣ ಹಾಕಿ, ರೈತರಿಗೆ ಸೂಕ್ತ ಪರಿಹಾರ ಹಣವನ್ನು ಶೀಘ್ರವಾಗಿ ಒದಗಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು; (ಸಂಪೂರ್ಣ ವಿವರ ನೀಡುವುದು); | ಬೆಂಗಳೂರು ದಕ್ಷಿಣ ಜಿಲ್ಲೆಯಲ್ಲಿ ಕಾಡಾನೆ ಹಾವಳಿಯನ್ನು ತಡೆಗಟ್ಟಲು ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗಿದೆ.<br><br>ಆನೆ ಕಾರ್ಯಪಡೆಗಳ ಸ್ಥಾಪನೆ:<br><br>• ಸರ್ಕಾರವು ದಿನಾಂಕ:30.06.2023 ರ ಆದೇಶದಲ್ಲಿ ಬೆಂಗಳೂರು ದಕ್ಷಿಣ (ರಾಮನಗರ) ಹಾಗೂ ಬೆಂಗಳೂರು ಜಿಲ್ಲೆಗಳಲ್ಲಿ ಕಾಡಾನೆ ಹಾವಳಿಯನ್ನು ತಡೆಗಟ್ಟಲು ಅಧಿಕಾರಿ / ಸಿಬ್ಬಂದಿಗಳನ್ನೊಳಗೊಂಡ ಆನೆ ಕಾರ್ಯಪಡೆ (Elephant Task Force) ನ್ನು ರಚಿಸಲಾಗಿರುತ್ತದೆ. ವಿವರ ಈ ಕೆಳಕಂಡಂತಿದೆ |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|

| ಕ್ರ.ಸಂ | ಜಿಲ್ಲೆ | ವಿಭಾಗ | ತಾಲ್ಲೂಕು | ಇ.ಟಿ.ಎಫ್ ನಲ್ಲಿ ಕಾರ್ಯ ನಿರ್ವಹಿಸುತ್ತಿರುವ ಹೊರಗುತ್ತಿಗೆ ನೌಕರರ ಸಂಖ್ಯೆ |
|---|---|---|---|---|
| 1 | ಬೆಂಗಳೂರು ದಕ್ಷಿಣ | ರಾಮನಗರ | ರಾಮನಗರ | 25 |
| | | | ಕನಕಪುರ | |
| | | | ಮಾಗಡಿ | |
| | | | ಚನ್ನಪಟ್ಟಣ | |
| | | | ಹಾರೋಹಳ್ಳಿ | |
| 2 | ಬೆಂಗಳೂರು ನಗರ/ ಬೆಂಗಳೂರು ದಕ್ಷಿಣ | ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನವನ | ಆನೇಕಲ್ | 25 |
| | | | ಬೆಂಗಳೂರು ದಕ್ಷಿಣ | |
| | | | ಹಾರೋಹಳ್ಳಿ | |
| | | | ಕನಕಪುರ | |
| | ಒಟ್ಟು | | | 50 |

- ಬನ್ನೇರುಘಟ್ಟ ವಿಭಾಗ ವ್ಯಾಪ್ತಿಯಲ್ಲಿ ಆನ ಕಾರ್ಯಪಡೆ (ETF) ಗಳಿಗೆ 24X7 ಕಾರ್ಯ ನಿರ್ವಹಿಸಲು ನಿಯಂತ್ರಣ ಕೊಠಡಿಯನ್ನು ಸ್ಥಾಪಿಸಿದ್ದು, ನಿಯಂತ್ರಣ ಕೊಠಡಿಗೆ ಬರುವ ಕರೆಗಳಿಗೆ ಸ್ಪಂದಿಸಿ ಕೂಡಲೇ ಕ್ರಮವಹಿಸಲಾಗುತ್ತಿದೆ.

- ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನವನದ ವ್ಯಾಪ್ತಿಯಲ್ಲಿ ಕಾಡಾನೆ ಹಾವಳಿಯನ್ನು ತಡೆಗಟ್ಟಲು ವಿಭಾಗೀಯ ಕಮಾಂಡ್ ಕೇಂದ್ರವನ್ನು ತೆರೆದಿದ್ದು, ಸದರಿ ಕೇಂದ್ರದಲ್ಲಿ ಆನೆಯ ಚಲನ ವಲನವನ್ನು ಪರಿಶೀಲಿಸಲಾಗುತ್ತಿದ್ದು, ಸದರಿ ಕೇಂದ್ರಕ್ಕೆ ಸಾರ್ವಜನಿಕರು ಆನೆ ಇರುವಿಕೆ ಬಗ್ಗೆ ಮಾಹಿತಿಯನ್ನು ನೀಡಬಹುದಾಗಿದ್ದು, ಸದರಿ ಮಾಹಿತಿಯನ್ನು ಪರಿಶೀಲಿಸಿ ಸೂಕ್ತ ಕ್ರಮ ಕೈಗೊಳ್ಳಲಾಗುತ್ತಿದೆ.

ಭೌತಿಕ ತಡೆಗೋಡೆ ನಿರ್ಮಾಣ

ಕಾಡಂಚಿನ ರೈತರ ಜಮೀನುಗಳಿಗೆ ಕಾಡಾನೆಯು ಸೇರಿದಂತೆ ಕಾಡು ಪ್ರಾಣಿಗಳು ಬಾರದಂತೆ ತಡೆಯಲು ರೈಲ್ವೆ ಹಳಿಗಳ ಬ್ಯಾರಿಕೇಡ್ ನಿರ್ಮಾಣ, Special Structures ನಿರ್ಮಾಣ, ಸೋಲಾರ್ ತಂತಿಬೇಲಿ ನಿರ್ಮಾಣ, ಆನೆ ನಿರೋಧಕ ಕಂದಕ ನಿರ್ಮಾಣ ಮಾಡಲಾಗಿರುತ್ತದೆ.

ಬೆಂಗಳೂರು ದಕ್ಷಿಣ/ ನಗರ ಜಿಲ್ಲೆಯಲ್ಲಿ ಪ್ರಸ್ತುತ ಸಾಲಿನವರೆಗೂ ನಿರ್ಮಾಣ ಮಾಡಲಾಗಿರುವ ಸೋಲಾರ್ ಟೆಂಟಿಕಲ್ ತಂತಿಬೇಲಿ, ಆನೆ ತಡೆ ಕಂದಕ ಹಾಗೂ ರೈಲ್ವೇ ಬ್ಯಾರಿಕೇಡ್ ನಿರ್ಮಾಣ ಕಾಮಗಾರಿಯ ವಿವರ ಈ ಕೆಳಕಂಡಂತೆ ಇರುತ್ತದೆ. (ಪ್ರಸ್ತುತ ಸಾಲಿನವರೆಗೂ)

<table>
<tr><th>ಕ್ರ. ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td></td><td></td><td>
(ಕಿ.ಮೀಗಳಲ್ಲಿ)
<table>
<tr><td>ಭೌತಿಕ ತಡೆಗೋಡೆ</td><td>ರಾಮನಗರ ವಿಭಾಗ</td><td>ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನವನ ವಿಭಾಗ</td><td>ಒಟ್ಟು</td></tr>
<tr><td>ಸೋಲಾರ್ ಟೆಂಟೆಕಲ್ ತಂತಿಬೇಲಿ</td><td>41</td><td>81.035</td><td>122.035</td></tr>
<tr><td>ಆನೆ ತಡೆ ಕಂದಕ ನಿರ್ಮಾಣ</td><td>24.58</td><td>6.5</td><td>31.08</td></tr>
<tr><td>ರೈಲ್ವೇ ಬ್ಯಾರಿಕೇಡ್</td><td>8.25</td><td>57.351</td><td>65.601</td></tr>
</table>
ಮುಂದುವರೆದು, ಪ್ರಸಕ್ತ ಸಾಲಿನಲ್ಲಿ ರಾಮನಗರ ವಿಭಾಗ ವ್ಯಾಪ್ತಿಯಲ್ಲಿ 3.00 ಕಿಮೀ ಹಾಗೂ ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನವನ ವಿಭಾಗ ವ್ಯಾಪ್ತಿಯಲಿ 10.68 ಕಿಮೀ. ಒಟ್ಟಾರೆ 13.68 ಕಿಮೀ ರೈಲ್ವೇ ಬ್ಯಾರಿಕೇಡ್ ನಿರ್ಮಾಣ ಕಾಮಗಾರಿ ಪ್ರಗತಿಯಲ್ಲಿರುತ್ತದೆ.<br>
ಜಲ ಸಂಪನ್ಮೂಲ ಅಭಿವೃದ್ಧಿ:<br>
• ವನ್ಯಪ್ರಾಣಿಗಳಿಗಾಗಿ ಅರಣ್ಯ ಪ್ರದೇಶಗಳ ಒಳಗೆ ನೀರಿನ ಲಭ್ಯತೆ ಹೆಚ್ಚಿಸಲು ರಕ್ಷಿತಾರಣ್ಯಗಳಲ್ಲಿ ಕೆರೆಗಳ ನಿರ್ಮಾಣ ಹಾಗೂ ಪುನಶ್ಚೇತನಗೊಳಿಸಿ ವನ್ಯಪ್ರಾಣಿಗಳ ಆವಾಸ ಸ್ಥಾನವನ್ನು ಅಭಿವೃದ್ಧಿಗೊಳಿಸಲಾಗುತ್ತಿದೆ. ಇದರಿಂದ ಕಾಡಾನೆ ಹಾಗೂ ಇತರೆ ವನ್ಯಪ್ರಾಣಿಗಳು ಕಾಡಿನಿಂದ ಹೊರಗೆ ಬಾರದಂತೆ ತಡೆಯಲಾಗುತ್ತಿದೆ.<br>
ಆವಾಸ ಸ್ಥಾನ ಅಭಿವೃದ್ಧಿ:<br>
• ಲಂಟನಾ, ಯುಪೋಟೋರಿಯಂ ಇನ್ನು ಮುಂತಾದ ಕಳೆ ಸಸ್ಯಗಳನ್ನು ತೆರವುಗೊಳಿಸಿ, ಹೆಚ್ಚಿನ ಅರಣ್ಯ ಪ್ರದೇಶಗಳಲ್ಲಿ ಬಿದರು ಸೇರಿದಂತೆ ವಿವಿಧ ಜಾತಿಯ ಸಸಿಗಳನ್ನು ನೆಡುವ ಕಾರ್ಯಕ್ರಮ ಕೈಗೊಂಡು ಆನೆಗಳಿಗಳಿಗೆ ಪೂರಕವಾದ ಆಹಾರ ಒದಗಿಸಲು ಅನುವು ಮಾಡಿಕೊಳ್ಳಲು ಅವಕಾಶ ಕಲ್ಪಿಸಲಾಗುತ್ತಿದೆ.<br>
• ವನ್ಯಜೀವಿಗಳ ಕಾರಿಡಾರ್‌ಗಳಲ್ಲಿ ಅರಣ್ಯ ಒತ್ತುವರಿ ತೆರವುಗೊಳಿಸಿ, ಕಾರಿಡಾರ್‌ಗಳು ರಕ್ಷಣೆ ಮಾಡಿ, ಆಸ್ತಿ ನಾಶ ಪ್ರಕರಣಗಳನ್ನ ನಿಯಂತ್ರಿಸಲು ಕ್ರಮಕೈಗೊಳ್ಳಲಾಗುತ್ತಿದೆ.<br>
ಆಧುನಿಕ ತಂತ್ರಜ್ಞಾನ ಬಳಕೆ:<br>
• ವನ್ಯಜೀವಿಗಳ ಚಲನವಲನಗಳನ್ನು ಗುರುತಿಸಲು Drone, AI cameras, Farm Guard ಇನ್ನು ಮುಂತಾದ ಆಧುನಿಕ ತಂತ್ರಜ್ಞಾನಗಳನ್ನು ಬಳಸಿ ವನ್ಯಜೀವಿ-ಮಾನವ ಸಂಘರ್ಷವನ್ನು ತಡೆಯಲು ಕ್ರಮಕೈಗೊಳ್ಳಲಾಗುತ್ತಿದೆ.
</td></tr>
</table>

Bellad

| ಕ್ರ.<br>ಸಂ | ಪ್ರಶ್ನೆ | ಉತ್ತರ |
|---|---|---|
| | | • Alert sound system, AI cameras, Smart solar Fence Alert Massage, early warning system, Dog squad, ಇತ್ಯಾದಿಗಳನ್ನು ಅಳವಡಿಸಿ ಮಾನವ ವನ್ಯಜೀವಿಗಳ ಸಂಘರ್ಷವನ್ನು ತಡೆಯಲು ಕ್ರಮಕೈಗೊಳ್ಳಲಾಗಿದೆ.<br>• "ಆನೆ ಎಲ್ಲಿ" APP ಮೂಲಕ ಆನೆ ಇರುವಿಕೆ ಬಗ್ಗೆ ಪತ್ತೆ ಹಚ್ಚಿ ಸಾರ್ವಜನಿಕರಿಗೆ ಗಮನಕ್ಕೆ ತರಲು ಹಾಗೂ ಎಚ್ಚರದಿಂದದಿರಲು ಅರಿವು ಮೂಡಿಸಲಾಗುತ್ತಿದೆ.<br>• ಕಾಡಂಚಿನ ಜನಗಳಿಗೆ ಅನುಕೂಲವಾಗುವಂತೆ Aane mitra ಮೂಲಕ ಅನುಕೂಲಗಳನ್ನು ಮಾಡಿಕೊಡಲಾಗುತ್ತಿದೆ.<br>• ವನ್ಯಪ್ರಾಣಿಗಳಿಂದ ಹಾನಿಗೊಳಗಾದ ರೈತರು ಹಾಗೂ ನಾಗರೀಕರಿಗೆ ಪರಿಹಾರಧನವನ್ನು ಇ-ಪರಿಹಾರ ತಂತ್ರಾಂಶದ ಮೂಲಕ ಪಾವತಿಸಲು ಕ್ರಮಕೈಗೊಳ್ಳಲಾಗುತ್ತಿದೆ. ಈ ಆನ್‌ಲೈನ್ ಅಪ್ಲಿಕೇಶನ್‌ನಲ್ಲಿ ಬೆಳೆನಾಶ, ಆಸ್ತಿನಷ್ಟ ಮತ್ತು ಜೀವಹಾನಿ ಮತ್ತು ಇತರೆ ದಾಖಲಿಸಿದ ಪ್ರಕರಣಗಳಿಗೆ ಸಂಬಂದಿಸಿದಂತೆ ಪರಿಹಾರಧನವನ್ನು ಒದಗಿಸುವ ಪ್ರಕ್ರಿಯೆಯನ್ನು ಸುಗಮಗೊಳಿಸಲಾಗಿರುತ್ತದೆ.<br>ಇತರೆ ಕ್ರಮಗಳು:<br>• ಅರಣ್ಯ ಸಹಾಯವಾಣಿ 1926 ಮೂಲಕ ವನ್ಯಜೀವಿ ಸಂಘರ್ಷಗಳ ಬಗ್ಗೆ ದೂರು ದಾಖಲಾದಲ್ಲಿ ಕೂಡಲೇ ಸಿಬ್ಬಂದಿಗಳು ಸ್ಥಳಕ್ಕೆ ತೆರಳಿ ನಿಯಮಾನುಸಾರ ಸಮಸ್ಯೆ ಬಗೆಹರಿಸಲು ಕ್ರಮ ಕೈಗೊಳ್ಳಲಾಗುತ್ತದೆ<br>• ವನ್ಯಜೀವಿಗಳ ಕಳ್ಳಬೇಟೆ ತಡೆಶಿಬಿರ (APC), ಆನೆ ಹಿಮ್ಮೆಟ್ಟಿಸುವ ತಂಡ (ADC)ಗಳನ್ನು ಸ್ಥಾಪನೆ ಮಾಡಿ ವನ್ಯಜೀವಿಗಳ ಚಲನವಲನಗಳನ್ನು ಗಮನಿಸಿ ನಾಡಿಗೆ ಬರದಂತೆ ತಡೆಯಲಾಗುತ್ತಿದೆ.<br>• ಕಾಡಂಚಿನ ಗ್ರಾಮಗಳಲ್ಲಿ ವನ್ಯಜೀವಿ, ಅರಣ್ಯ ರಕ್ಷಣೆ ಬಗ್ಗೆ ಸಾರ್ವಜನಿಕರಿಗೆ ಅರಿವು ಮೂಡಿಸುವ ಕಾರ್ಯಕ್ರಮಗಳಾದ ಬೀದಿ ನಾಟಕ, "ಚಿಣ್ಣರ ವನ-ದರ್ಶನ" ಹಾಗೂ ಇತರೆ ಸಾರ್ವಜನಿಕ ಅರಿವು ಮೂಡಿಸುವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿದೆ. |
| ಇ) | ಬೆಂಗಳೂರು ದಕ್ಷಿಣ ಜಿಲ್ಲೆಯಲ್ಲಿ ಕಾಡಾನೆಗಳ ಹಾವಳಿ ತಡೆಯಲು ಎಷ್ಟು ಕಿ.ಮೀ ರೈಲ್ವೆ ಬ್ಯಾರಿಕೇಡ್ ತಡೆಗೋಡೆ ಅವಶ್ಯಕವಿದೆ; ಈ ತಡೆಗೋಡೆ ನಿರ್ಮಾಣಕ್ಕೆ ಅವಶ್ಯಕವಿರುವ ಅನುದಾನವೆಷ್ಟು; ಇದಕ್ಕಾಗಿ ಸರ್ಕಾರವು ಕೈಗೊಂಡ ಕ್ರಮವೇನು.? | ಬೆಂಗಳೂರು ದಕ್ಷಿಣ ಜಿಲ್ಲೆಯಲ್ಲಿ ಕಾಡಾನೆಗಳು ಗ್ರಾಮಗಳಿಗೆ ಬಾರದಂತೆ ತಡೆಗಟ್ಟಲು ಅವಶ್ಯವಿರುವ ರೈಲ್ವೆ ಬ್ಯಾರಿಕೇಡ್ ಹಾಗೂ ಇದಕ್ಕೆ ಅಗತ್ಯವಿರುವ ಅನುದಾನದ ವಿವರ ಈ ಕೆಳಕಂಡಂತಿದೆ. |

<table>
<tr><th>ಕ್ರ. ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td></td><td></td><td>
<table>
<tr><th colspan="3">ಬೆಂಗಳೂರು ದಕ್ಷಿಣ ಜಿಲ್ಲೆ</th></tr>
<tr><th>ವಿಭಾಗ</th><th>ಅಗಶ್ಯವಿರುವ ರೈಲ್ವೆ ಬ್ಯಾರಿಕೇಡ್ (ಕಿ.ಮೀಗಳಲ್ಲಿ)</th><th>ರೈಲ್ವೆ ಬ್ಯಾರಿಕೇಡ್ ನಿರ್ಮಾಣ ಮಾಡಲು ಅಗತ್ಯವಿರುವ ಸರಾಸರಿ ಅನುದಾನ (ರೂ ಲಕ್ಷಗಳಲ್ಲಿ)</th></tr>
<tr><td>ರಾಮನಗರ (ಪ್ರಾ)</td><td>1.5</td><td>262.5</td></tr>
<tr><td>ಬನ್ನೇರುಘಟ್ಟ ರಾ. ಉ</td><td>51</td><td>8670.00</td></tr>
<tr><td>ಒಟ್ಟು</td><td>52.5</td><td>8932.50</td></tr>
</table>
</td></tr>
<tr><td></td><td></td><td>ಮುಂದುವರೆದು ಮಾನವ – ಕಾಡಾನೆ ಸಂಘರ್ಷ ತಡೆಗಟ್ಟಲು ಬೆಂಗಳೂರು ದಕ್ಷಿಣ ಜಿಲ್ಲೆಗೆ ಒಟ್ಟು 52.5 ಕಿಮೀ ರೈಲ್ವೇ ಬ್ಯಾರಿಕೇಡ್ ನಿರ್ಮಾಣ ಅವಶ್ಯವಿದ್ದು, ರೂ.8932.50 ಲಕ್ಷಗಳ ಅನುದಾನದ ಅಗತ್ಯತೆ ಇರುತ್ತದೆ. ಆರ್ಥಿಕ ಸಂಪನ್ಮೂಲದ ಲಭ್ಯತೆಯ ಮೇರೆಗೆ ಕಾಮಗಾರಿಯನ್ನು ಹಂತ ಹಂತವಾಗಿ ಅನುಷ್ಠಾನ ಮಾಡಲಾಗುವುದು.</td></tr>
</table>

ಸಂಖ್ಯೆ: ಅಪಜೀ 107 ಎಫ್‌ಡಬ್ಲ್ಯೂಎಲ್ 2026

(ಈಶ್ವರ ಬಿ. ಖಂಡ್ರೆ)
ಅರಣ್ಯ ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು

ಅನುಬಂಧ-1

## 2025-26ನೇ ಸಾಲಿನಲ್ಲಿ ಆನೆ ದಾಳಿಯಿಂದ ಮೃತಪಟ್ಟಿರುವ ಹಾಗೂ ವಾರಸುದಾರರಿಗೆ ನೀಡಿರುವ ಪರಿಹಾರದ ವಿವರಗಳು

| ಕ್ರ ಸಂ | ವರ್ಷ | ಜಿಲ್ಲೆ | ವಿಭಾಗ | ಮೃತರ ಹೆಸರು ಶ್ರೀ/ಶ್ರೀಮತಿ | ದಾಳಿಗೊಳಗಾದ ದಿನಾಂಕ | ನೀಡಲಾಗಿರುವ ಪರಿಹಾರದ ಮೊತ್ತ ರೂ. |
|---|---|---|---|---|---|---|
| 1 | 2025-26 | ಬೆಂಗಳೂರು ದಕ್ಷಿಣ | ಬನ್ನೇರುಘಟ್ಟ | ಶ್ರೀಮತಿ ಈರಮ್ಮ ಕೋಂ ಚಿಕ್ಕೈದಯ್ಯ | 31.03.2025 | 20,00,000.00 |
| 2 | | | ರಾಮನಗರ | ಶ್ರೀ ಶ್ರೇಯಸ್ ಬಿನ್ ಚಂದ್ರಶೇಖರ್ (ಆನೆ ಕಾರ್ಯಪಡೆ ಹೊರಗುತ್ತಿಗೆ ನೌಕರ) | 12.08.2025 | 30,00,000.00 |
| 3 | | | ಬನ್ನೇರುಘಟ್ಟ | **ಶ್ರೀ ವೆಂಕಟಾಚಲಯ್ಯ ಬಿನ್ ಮುನಿಯಪ್ಪ | 29.10.2025 | 5,00,000.00 |
| 4 | | | ರಾಮನಗರ | ಶ್ರೀ ಪುಟ್ಟಮಾದೇಗೌಡ ಬಿನ್ ಉಮ್ಮತ್ತೂರೇಗೌಡ | 13.12.2025 | 20,00,000.00 |

**ಬನ್ನೇರುಘಟ್ಟ ವಿಭಾಗ ವ್ಯಾಪ್ತಿಯಲ್ಲಿ ಮೃತಪಟ್ಟಿರುವ ಶ್ರೀ ವೆಂಕಟಾಚಲಯ್ಯ ಬಿನ್ ಮುನಿಯಪ್ಪರವರ ಕುಟುಂಬದವರಿಗೆ ರೂ 5.00 ಲಕ್ಷಗಳ ಪರಿಹಾರದನ್ನು ಪಾವತಿಸಿದ್ದು, ಉಳಿದ ರೂ 15.00 ಲಕ್ಷಗಳನ್ನು ಕಾನೂನುಬದ್ಧ ವಾರಸುದಾರರು ಇತ್ಯರ್ಥಗೊಂಡ ನಂತರ ನಿಯಮಾನುಸಾರ ಪಾವತಿಸಲು ಕ್ರಮಕೈಗೊಳ್ಳಲಾಗುವುದು

## 2025-26ನೇ ಸಾಲಿನಲ್ಲಿ ಆನೆ ದಾಳಿಯಿಂದ ಆಸ್ತಿ ಹಾನಿ ಮತ್ತು ಬೆಳೆ ಹಾನಿ ಪ್ರಕರಣಗಳಿಗೆ ನೀಡಲಾಗಿರುವ ಪರಿಹಾರದ ವಿವರ

| ಕ್ರ ಸಂ | ವರ್ಷ | ಜಿಲ್ಲೆ | ವಿಭಾಗ | ಆಸ್ತಿ ಹಾನಿ | | ಬೆಳೆ ಹಾನಿ | |
|---|---|---|---|---|---|---|---|
| | | | | ಪ್ರಕರಣಗಳ ಸಂಖ್ಯೆ | ಪಾವತಿಸಲಾದ ಮೊತ್ತ | ಪ್ರಕರಣಗಳ ಸಂಖ್ಯೆ | ಪಾವತಿಸಲಾದ ಮೊತ್ತ |
| 1 | 2025-26 | ಬೆಂಗಳೂರು ದಕ್ಷಿಣ | ಬನ್ನೇರುಘಟ್ಟ | 159 | 1,11,3600/- | 1379 | 1,23,50,999/- |
| 2 | | | ರಾಮನಗರ | 472 | 23,74,580/- | 3625 | 2,31,50,624/- |

ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ(ವನ್ಯಜೀವಿ)
ಮತ್ತು ಮುಖ್ಯ ವನ್ಯಜೀವಿ ಪರಿಪಾಲಕರು
ಕರ್ನಾಟಕ, ಬೆಂಗಳೂರು.